# ಏನ್ಮಾಡೋದು!

ಸಿದ್ದನಗೌಡ ಬಿಜ್ಜೂರ, ಸರೂರ
ಕಲೆ: ಸಂತೋಷ್ ಸಸಿಹಿತ್ಲು

ಏನ್ಮಾಡೋದು ಏನ್ಮಾಡೋದು?
ಗೊತ್ತಿಲ್ಲಪ್ಪ ಯಾಕೋ ಏನೋ
ಬಿಸಿಲು ಬಹಳ ಉರಿತದೆ
ಕುದಿಯೋ ಸೂರ್ಯನ ಕಡಾಯಿ ಕೆಳಗೆ
ಬೆಂಕಿ ಹೆಚ್ಚಿದಂಗ್ ಕಾಣ್ತದೆ

ಏನ್ಮಾಡೋದು ಏನ್ಮಾಡೋದು?
ಭೂಮಿ ತುಂಬಾ ಹಸಿರಿನ ಮರ
ಹಚ್ಚಿ ಹಚ್ಚೀ ಹೆಚ್ಚ ಮಾಡೋದು.
ಗೊತ್ತಿಲ್ಲಪ್ಪ ಯಾಕೋ ಏನೋ
ಮಳೆ ತುಟ್ಟಿ ಆಗ್ತಿದೆ
ಮುಗಿಲ್ ಮೇಲಿನ ನೀರಿನ ಟ್ಯಾಂಕು
ಖಾಲಿ ಆದಂಗ್ ಕಾಣ್ತದೆ

ಏನ್ಮಾಡೋದು ಏನ್ಮಾಡೋದು?
ಭೂಮಿ ತುಂಬಾ ಹಸಿರಿನ ಮರ
ಹಚ್ಚಿ ಹಚ್ಚೀ ಹೆಚ್ಚ ಮಾಡೋದು.
ಗೊತ್ತಿಲ್ಲಪ್ಪ ಯಾಕೋ ಏನೋ
ಚಳಿ ಬಹಳ ಹಿಡಿತಿದೆ
ಭೂಮಿ ತೊಟ್ಕೊಂಡ್ ಸ್ವೆಟರ್ ಗುಂಡಿ
ಎಲ್ಲೋ ಬಿಚ್ಚಿದಂಗ ಕಾಣ್ತದೆ

ಏನ್ಮಾಡೋದು ಏನ್ಮಾಡೋದು?
ಭೂಮಿ ತುಂಬಾ ಹಸಿರಿನ ಮರ
ಹಚ್ಚಿ ಹಚ್ಚೀ ಹೆಚ್ಚ ಮಾಡೋದು.



## ಕುಂಚ ಪ್ರಪಂಚ





**ಸಿದ್ಧಿ ಅರವಿಂದ್**
5ನೇ ತರಗತಿ, ರೀಜೆನ್ಸಿ ಪಬ್ಲಿಕ್ ಶಾಲೆ, ಬೆಂಗಳೂರು





**ಶ್ರೀಗೌರಿ ನಾಡಿಗ್**
5ನೇ ತರಗತಿ, ವಿಕಾಸ ವಿದ್ಯಾ ಸಮಿತಿ, ಶಿವಮೊಗ್ಗ